ಸರಿನ ಬೇಗೆಯಲಿರದಲೇ ಭೂಪಾಲ ಕೇಳೆಂದ"

"ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವುದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವುದಾ ಜನಪದದ ಜನದಿ
ವಸು ತೆರಳುವುದು ವಸುವಿನಿಂ ಸಾ
ಧಿಸುವಡಾವುದಸಾಧ್ಯವದರಿಂ
ಕೃಷಿವಿಹೀನನ ದೇಶವದು ದುರ್ದೇಶ ಕೇಳೆಂದ"

"ಆ ಸುಯೋಧನನರಮನೆಯನವ
ನೀಶ ಹೊಕ್ಕನು ಪವನುಸುತ ದು
ಶ್ಯಾಸನನ ಸದನವನು ಪಾರ್ಥಗೆ ಕರ್ಣಭವನದಲಿ
ವಾಸವಾದುದು ಯಮಳರಿಗೆ ದು
ಶ್ಯಾಸನಾನುಜರರಮನೆಗಳುಳಿ
ದೈಸುಮನೆ ಭಂಡಾರವಾದುದು ಭೂಪ ಕೇಳೆಂದ

ಮುನ್ನಿನವರೇ ಮಂತ್ರಿ ಸಚಿವರು
ಮುನ್ನದಾವಂಗಾವ ಪರುಠವ
ಭಿನ್ನವಿಲ್ಲದೆ ಪೌರಜನವೆಸೆದಿರ್ದುದಿಭಪುರಿಯ"

ಕುಮಾರವ್ಯಾಸನ ಪ್ರಜ್ಞೆ ಹೊಸ ಅವಶ್ಯಕತೆಗಾಗಿ ಭಾಷೆಯನ್ನು ಪುನರ್ ನಿರ್ಮಿಸಿಕೊಂಡಿದೆ. ನಡುಗನ್ನಡದ ಭಾಮಿನಿ ಷಟ್ಪದಿಯ ತರಂಗ ಶೈಲಿ ಸರಳತೆಯನ್ನು ಮೈಗೂಡಿಸಿಕೊಂಡಿದೆ. ಕಾವ್ಯದ ಲಯದಲ್ಲಿಯೇ ಬಹಳಷ್ಟು ಅರ್ಥಗಳನ್ನು ವರ್ಣಿಸಬಲ್ಲ ಶಕ್ತಿ ಕುಮಾರವ್ಯಾಸನಿಗಿದೆ. ಛಂದಸ್ಸಿನಲ್ಲಿಯೂ ಪರಿಣಾಮಕಾರಿಯಾಗಿ ಸನ್ನಿವೇಶಗಳನ್ನು, ಅರ್ಥಗಳನ್ನು ಹಿಡಿದಿಡಲು ಸಾಧ್ಯವಾಗಿದೆ. ಅವನು ಬಳಸುವ ಪದಗಳು, ರೂಪಕಗಳು ನಡಿಗಟ್ಟುಗಳ ಕ್ರಮದಲ್ಲಿಯೇ ಮುಂದೆ ನಡೆಯಬಹುದಾದುದನ್ನು ಸೂಚಿಸುತ್ತವೆ. ಕಥನದ ನಿರೂಪಣೆಯಲ್ಲಿ ಭಾಷೆಯನ್ನು ಬಳಸಿಕೊಳ್ಳುವ ರೀತಿ ಅದ್ಭುತವಾದುದು. ಒಂದೇ ಸಂದರ್ಭದಲ್ಲಿ ವಿವಿಧ ಸಂಸ್ಕೃತಿಗಳ ಸ್ವಭಾವಗಳ ಚಿತ್ರಣಗಳು ಬರುತ್ತವೆ. ಈಗಿನ ಪರಿಭಾಷೆಯಲ್ಲಿ ಇದನ್ನು ಬಹುತ್ವ ನಿರೂಪಣೆಯ ಸಿದ್ಧಾಂತ ಎಂದು ಕರೆಯಲಾಗುತ್ತದೆ. ಕುಮಾರವ್ಯಾಸ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದೇ ಪ್ರಸಿದ್ಧನಾಗಿದ್ದಾನೆ. ರೂಪಕಗಳ ಬಳಕೆಯ ಬಗ್ಗೆ ಹಲವಾರು ಚರ್ಚೆಗಳು, ವ್ಯಾಖ್ಯಾನ ವಿವರಣೆಗಳು ಬಂದಿವೆ. ಅವುಗಳನ್ನು ಉದಾಹರಣೆಗಳ ಸಮೇತ ಇಲ್ಲಿ ವಿವರಿಸಲು ಸಾಧ್ಯವಾಗುತ್ತಿಲ್ಲ. ಸಾಹಿತ್ಯ ವಿದ್ಯಾರ್ಥಿಗಳು, ಅಧ್ಯಾಪಕರು, ವಿದ್ವಾಂಸರು, 'ಸರಸ ಸೌಗಂಧಿಕ ಪರಿಮಳ' ಎಂಬ ಕುಮಾರವ್ಯಾಸ ಭಾರತ ಸಂಗ್ರಹವನ್ನು ಓದಿದಾಗ ಕಾವ್ಯದ ಭಾಷೆ ಅದರ ತಾತ್ವಿಕತೆ ಮತ್ತು ಸಮಕಾಲೀನ ಬದುಕಿಗೆ ಬೇಕಾದ ಮೌಲ್ಯಗಳನ್ನು ಕಂಡುಕೊಳ್ಳಬಹುದು. ಜೊತೆಗೆ ಹೊಸದಾಗಿ ಕಾವ್ಯ ಬರೆಯಲು ಆರಂಭಿಸಿರುವ ತರುಣ ಕವಿಗಳು ಕಾವ್ಯದಲ್ಲಿ ಭಾಷಾ ಬಳಕೆ ಯಾವ ರೀತಿ ಇರಬೇಕೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಈ ಸಂಗ್ರಹವನ್ನು ಪದೇಪದೇ ಓದಬೇಕು. ●